# ಕರ್ನಾಟಕ ಸರ್ಕಾರದ ನಡವಳಿ

ವಿಷಯ: 1)ಶ್ರೀ ಬಿ.ಜಿ.ಶ್ರೀಧರನಾಯ್ಕ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಮತ್ತು 2)ಶ್ರೀ ಬಸವರಾಜಯ್ಯ, ಹಿಂದಿನ ಕಾರ್ಯದರ್ಶಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರುಗಳ ವಿರುದ್ಧದ ನಡವಳಿ ಕುರಿತು – ಆದೇಶ.

ಓದಲಾಗಿದೆ: ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ D.O.No. Compt/Uplok/BD/8662/2015/DRE-1, ದಿನಾಂಕ: 02-02-2018.

## ಪ್ರಸ್ತಾವನೆ:

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ:12-01-2018 ರ ವರದಿಯಲ್ಲಿ ಶ್ರೀ ದಯಾನಂದ ಬಿನ್ ಜಯಣ್ಣ, ಮತ್ತೋಡು ಗ್ರಾಮ ಮತ್ತು ಹೋಬಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು 1)ಶ್ರೀ ಮಹೇಶ್ವರಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತೋಡು ಗ್ರಾಮ ಪಂಚಾಯತಿ 2)ಶ್ರೀ ಬಿ.ಜಿ.ಶ್ರೀಧರನಾಯ್ಕ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತೋಡು ಗ್ರಾಮ ಪಂಚಾಯತಿ 3)ಶ್ರೀ ಬಸವರಾಜಯ್ಯ, ಹಿಂದಿನ ಕಾರ್ಯದರ್ಶಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

## ದೂರಿನ ಸಂಕ್ಷಿಪ್ತ ವಿವರಣೆ:

ದೂರುದಾರರು ತಮ್ಮ ದೂರಿನಲ್ಲಿ ಮತ್ತೋಡು ಗ್ರಾಮದ ವಾಸಿಯಾದ ರತ್ನಮ್ಮ ಕೋಂ ರಂಗನಾಥ ಇವರಿಗೆ 2014-15ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದ್ದು, ಅವರು ಮನೆಯ ತಳಪಾಯವಗಲೀ ಅಥವಾ ಗೋಡೆಯಾಗಲೀ ನಿರ್ಮಾಣ ಮಾಡಿರುವುದಿಲ್ಲ. ಮನೆ ಕಟ್ಟಿಕೊಳ್ಳಲು ಗ್ರಾಮ ಪಂಚಾಯತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಮನೆಯ ಕಾಮಗಾರಿ ಆಗದೇ 1ನೇ ಬಿಲ್ಲು ಮಂಜೂರಾಗಿ ಹಣ ಪಡೆದಿರುತ್ತಾರೆಂದು ಆಪಾದಿಸಿ ಈ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದಿನಾಂಕ:10-08-2015 ರಂದು ಎದುರುದಾರರನ್ನು ಮತ್ತೋಡು ಗ್ರಾಮ ಪಂಚಾಯತಿಯ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ನಿಯೋಜನೆ ಮಾಡಲಾಗಿತ್ತು. ಆ ಸಮಯದಲ್ಲಿ ದೂರಿನ ಸಂಬಂಧ ಅವರು ಮನಯ ಜಿ.ಪಿ.ಎಸ್. ಮಾಡಿರಲ್ಲಿಲ್ಲ. ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಮಾಡಿರುತ್ತಾರೆ. ಮತ್ತೋಡು ಗ್ರಾಮ ಪಂಚಾಯತಿಯ ದಾಖಲಾತಿ ಲಭ್ಯವಾಗದೇ ಇರುವುದರಿಂದ, ಹಾಲಿ ಇರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ದಾಖಲಾತಿ ಪಡೆಯಬೇಕಾಗಿದೆ. ಹಣ ಪಾವತಿ ದಿ:07-08-2015 ರಂದು ಆಗಿರುವುದರಿಂದ ಆ ವಿಷಯ ಎದುರುದಾರರ ಗಮನಕ್ಕೆ ಬಂದಿರುವುದಿಲ್ಲ. ದೂರುದಾರರಾದ ದಯಾನಂದ ಹೆಂಡತಿ ಹೆಸರಿಗೆ ಮನೆ ಸಾಲ ಪಡೆದು ರತ್ನಮ್ಮ ಮತ್ತು ಪವಿತ್ರ ಇಬ್ಬರೂ ಫಲಾನುಭವಿಗಳು ಒಂದೇ ಮನೆಗೆ ಜಿ.ಪಿ.ಎಸ್ ಮಾಡಿಸಿ ಹಣ ಪಡೆದಿರುವುದು ದಾಖಲಾಗಿರುತ್ತದೆ. ಆದ್ದರಿಂದ ಇಬ್ಬರು ಫಲಾನುಭವಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಎದುರುದಾರರ ಆಕ್ಷೇಪಣೆಯ ಮೇಲೆ ದುರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಮತ್ತೋಡು ಗ್ರಾಮದ ಶ್ರೀಮತಿ ರತ್ನಮ್ಮ ಕೋಂ ರಂಗನಾಥ್ ಇವರು ದೂರುದಾರರ ಮನೆಯ ತಳಮಟ್ಟದ ಕಾಮಗಾರಿಯ

ಜಿ.ಪಿ.ಎಸ್. ಮಾಡಿಸಿ ಪಂಚಾಯತ್ ಪಿಡಿಓ ಮಹೇಶ್ವರಪ್ಪ ಎನ್ನುವವರು ಸೇರಿ ರೂ.29,800/-ಗಳ ಮೊತ್ತವನ್ನು ಸರ್ಕಾರಕ್ಕೆ ಮೋಸ ಮಾಡಿ ಪಡೆದಿರುತ್ತಾರೆ. ಈ ಬಗ್ಗೆ ದೂರುದಾರರಿಗೆ ವಿಷಯ ತಿಳಿದು ಅವರಿಗೆ ತೊಂದರೆಯಾಗಬಹುದೆಂದು ಊಹಿಸಿ ದುರು ನೀಡಿರುತ್ತಾರೆ. ದೂರುದಾರರ ಮನೆಯ ಬಿಲ್ ಆಗುವಾಗಲೇ ರತ್ನಮ್ಮ ಕೋಂ ರಂಗನಾಥ್ ಇವರಿಗೆ ಹಣ ಪಾವತಿ ಮಾಡಿರುತ್ತಾರೆ ಮತ್ತು ತಳಪಾಯದ ಫೋಟೋವನ್ನು ತೋರಿಸುವುದನ್ನು ಬಿಟ್ಟು ತೋಲೆ ಮಟ್ಟದ ಬಿಲ್ ತೋರಿಸಿ ಹಣ ಪಡೆದಿರುತ್ತಾರೆ. ಈ ಬಗ್ಗೆ ಹೊಸದುರ್ಗ ತಾಲ್ಲೂಕಿನ ಇ.ಓ ರವರಿಗೆ ಸಹ ದೂರು ಸಲ್ಲಿಸಿರುತ್ತಾರೆಂದು ಹೇಳಿರುತ್ತಾರೆ.

ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಒಂದೇ ಮನೆಗೆ ಜಿ.ಪಿ.ಎಸ್ ಮಾಡಿಸಿ ಇಬ್ಬರು ಹಣವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಸದರಿ ಜಿ.ಪಿ.ಎಸ್ ಮಾಡಿದ ಸಂದರ್ಭದಲ್ಲಿ ಎದುರುದಾರರು ಮತ್ತೋಡು ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯದಲ್ಲಿರಲಿಲ್ಲವೆಂದು ಹೇಳಿರುತ್ತಾರೆ. ಈ ಸಂದರ್ಭದಲ್ಲಿ ಯಾರು ಮನೆಯನ್ನು ಕಟ್ಟಿ ಸಹಾಯಧನವನ್ನು ಪಡೆದಿರುತ್ತಾರೆ ಮತ್ತು ಮನೆಯನ್ನು ಕಟ್ಟದೆ ಯಾರು ಸಹಾಯಧನವನ್ನು ಪಡೆದಿರುತ್ತಾರೆ ಮತ್ತು ಸದರಿ ಸಹಾಯಧನವನ್ನು ಮಂಜೂರು ಮಾಡಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಯಾರು ಎಂಬುದನ್ನು ಪರಿಶೀಲನೆ ನಡೆಸುವ ಅಗತ್ಯತೆ ಕಂಡುಬಂದ ಕಾರಣ, ದೂರುದಾರರ ದೂರಿನ ಬಗ್ಗೆ ಹಾಗೂ ಮೇಲೆ ತಿಳಿಸಿರುವ ವಿಚಾರಗಳ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ ಪಂಚಾಯತ್ ಹೊಸದುರ್ಗ, ಚಿತ್ರದುರ್ಗ ಜಿಲ್ಲೆ ಇವರಿಗೆ ಆದೇಶಿಸಲಾಗಿತ್ತು.

ಕಾರ್ಯನಿರ್ವಾಹಕ ಅಧಿಕಾರಿ ರವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಶ್ರೀಮತಿ ಪವಿತ್ರ ಕೋಂ ದಯಾನಂದ ಮತ್ತು ಶ್ರೀಮತಿ ರತ್ನಮ್ಮ ಕೋಂ ರಂಗನಾಥ್, ಮತ್ತೋಡ್ ಇವರುಗಳಿಗೆ 2014-15ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿರುತ್ತದೆ. ಶ್ರೀಮತಿ ಪವಿತ್ರ ಕೋಂ ದಯಾನಂದ ಇವರು ಸ.ನಂ,58/ಪಿ7 ರಲ್ಲಿ ಮನೆ ನಿರ್ಮಿಸಿಕೊಂಡು ಸಂಪೂರ್ಣ ಅನುದಾನವನ್ನು ಪಡೆದುಕೊಂಡಿರುತ್ತಾರೆ. ಶ್ರೀಮತಿ ರತ್ನಮ್ಮ ಯಾವುದೇ ಮನೆಯನ್ನು ಕಟ್ಟಿಕೊಂಡಿರುವುದಿಲ್ಲ. ಆದರೆ ಪವಿತ್ರ ಇವರು ನಿರ್ಮಿಸಿದ ಮನೆಯ ಜಿ.ಪ.ಎಸ್. ಛಾಯಾಚಿತ್ರವನ್ನು ಆನ್‌ಲೈನ್‌ನಲ್ಲಿ ಅಳವಡಿಸಿ ಮೊದಲನೇ ಕಂತಿನ ಅನುದಾನ ರೂ.29,500/- ಬಿಲ್ ಪಡೆದಿರುತ್ತಾರೆ. ನಂತರದಲ್ಲಿ ಪ್ರಸ್ತುತ ತಳಪಾಯ ನಿರ್ಮಿಸಿದ್ದು, ಸದರಿ ಸ್ಥಳ ರತ್ನಮ್ಮರವರ ಹೆಸರಿನಲ್ಲಿ ಇರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು ಸದರಿ ಸಂದರ್ಭದಲ್ಲಿ ಶ್ರೀ ಶ್ರೀಧರನಾಯಕ್ ಬಿ.ಜಿ. ಇವರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಗಿ ಹಾಗೂ ಶ್ರೀ ಬಸವರಾಜಯ್ಯ ಇವರು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆಂದು ಹೇಳಿರುತ್ತಾರೆ. ಆದ್ದರಿಂದ ಶ್ರೀ ಶ್ರೀಧರನಾಯಕ್ ಮತ್ತು ಶ್ರೀ ಬಸವರಾಜಯ್ಯ ಇವರನ್ನು ಈ ಪ್ರಕರಣದಲ್ಲಿ ಪಕ್ಷಗಾರನನ್ನಾಗಿ ಮಾಡಿ ಅವರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿರುತ್ತದೆ.

2ನೇ ಎದುರುದಾರರಾದ ಶ್ರೀ ಬಿ.ಜೆ.ಶ್ರೀಧರನಾಯ್ಕ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಪವಿತ್ರ ಕೋಂ ದಯಾನಂದ ಹಾಗೂ ರತ್ನಮ್ಮ ಕೋಂ ರಂಗನಾಥ ಇವರು 2014-15ನೇ ಸಾಲಿನ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿದ್ದು, ಫಲಾನುಭವಿ ಆಯ್ಕೆ ಪಟ್ಟಿಯ ನಮೂನೆ 17 ರಲ್ಲಿ ಕ್ರಸಂ.14 ಮತ್ತು 15 ರಲ್ಲಿ ಬಂದಿದ್ದು, ಫಲಾನುಭವಿ ಸಂಖ್ಯೆ ಕ್ರಮವಾಗಿ 188330 ಮತ್ತು 188332 ಹೊಂದಿರುತ್ತಾರೆ. ಮನೆಯ ಪ್ರಗತಿವಾರು ಜಿ.ಪಿ.ಎಸ್ ಮಾಡುವಾಗ ಪಂಚಾಯತಿ ಕಾರ್ಯದರ್ಶಿಗಳಾದ ಶ್ರೀ ಬಸವರಾಜಯ್ಯರವರು ಫಲಾನುಭವಿ ಕೋಡ್ ನಮೂದಿಸುವಾಗ ಕೈತಪ್ಪಿನಿಂದ 188330ಗೆ ಬದಲಾಗಿ 188332 ಎಂದು ನಮೂದಿಸಿ ಜಿ.ಪಿ.ಎಸ್ ಮಾಡಿದ್ದು, ಆಡಿಟ್ ಓ.ಕೆ. ಆಗಿ ರತ್ನಮ್ಮ ಕೋಂ ರಂಗನಾಥ್‌ರವರ ಖಾತೆಗೆ ಹಣ ಬಿಡುಗಡೆಯಾಗಿರುತ್ತದೆ. ನಂತರ ಪವಿತ್ರ ಕೋಂ ದಯಾನಂದ ಇವರ ಮೊದಲನೇ ಹಂತದ ಜಿ.ಪಿ.ಎಸ್ ಮಾಡಲಾಗಿ ಅವರ ಖಾತೆಗೂ ಸಹ ಬಿಡುಗಡೆಯಾಗಿರುತ್ತದೆ. ಪ್ರಸ್ತುತ ಪವಿತ್ರ ಕೋಂ ದಯಾನಂದರವರು ಹಂತವಾರು ಮನೆ ನಿರ್ಮಾನ ಮಾಡಿಕೊಂಡಿದ್ದು, ಮನೆ ಪೂರ್ಣಗೊಂಡಿರುತ್ತದೆ ಮತ್ತು ಸಂಪೂರ್ಣ ಹಣವನ್ನು ಪಡೆದಿರುತ್ತಾರೆ. ರತ್ನಮ್ಮ ಕೋಂ ರಂಗನಾಥ್ ರವರು ಮೊದಲನೇ ಹಂತದ ತಳಪಾಯ ಮಾತ್ರ ನಿರ್ಮಿಸಿದ್ದು, ಮೊದಲನೇ ಹಂತದ ಹಣ ಮಾತ್ರ ಸದರಿಯವರ ಖಾತೆಗೆ ಜಮೆಯಾಗಿರುತ್ತದೆ. ಪಂಚಾಯತಿ ವಸತಿ ಯೋಜನೆಗಳ ಹಂತವಾರು ಪ್ರಗತಿಯ ಜಿ.ಪಿ.ಎಸ್ ಮಾಡುವ ಕಾರ್ಯವನ್ನು ಪಂಚಾಯತಿಯ ಕಾರ್ಯದರ್ಶಿಯಾದ ಬಸವರಾಜಯ್ಯರವರಿಗೆ ವಹಿಸಲಾಗಿತ್ತು ಹಾಗೂ ಫೋಟೋ ಮಿಸ್ ಮ್ಯಾಚ್ ಆಗಿ ಜಿ.ಪಿ.ಎಸ್ ಮಾಡಲಾದ ಪ್ರಕರಣವನ್ನು ಕಾರ್ಯದರ್ಶಿಯವರು ಪಿಡಿಓ ರವರ ಗಮನಕ್ಕೆ ತಂದಿರುವುದಿಲ್ಲವೆಂದು ಹೇಳಿರುತ್ತಾರೆ.

3ನೇ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ನೋಟಿಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

2ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ ಕೈತಪ್ಪಿನಿಂದಾಗಿ ಫಲಾನುಭವಿ ಕೋಡ್ ನಮೂದಿಸುವಾಗ ಫಲಾನುಭವಿ ಸಂಖ್ಯೆಯನ್ನು ನಮೂದಿಸಿರುವುದರಿಮದ ತಪ್ಪು ಉಂಟಾಗಿರುತ್ತದೆಯೆಂದು ಹೇಳಿರುತ್ತಾರೆ. ಆದರೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹೊಸದುರ್ಗ ಇವರ ವರದಿಯನ್ನು ಪರಿಶೀಲಿಸಿದಾಗ, ಶ್ರೀಮತಿ ರತ್ನಮ್ಮ ಎಂಬುವರು ತಳಪಾಯ ನಿರ್ಮಿಸಿರುವ ಜಾಗವು ರತ್ನಮ್ಮರವರ ಮಾವನ ಹೆಸರಿನಲ್ಲಿದ್ದು, ರತ್ನಮ್ಮರವರ ಹೆಸರಿನಲ್ಲಿ ಯಾವುದೇ ನಿವೇಶನವಾಗಲೀ ಅಥವಾ ಜಾಗವಾಗಲೀ ಇರುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ರತ್ನಮ್ಮರವರ ಹೆಸರಿನಲ್ಲಿ ಯಾವುದೇ ನಿವೇಶನ ಇಲ್ಲದೇ ಇದ್ದರೂ ಸಹ ಅದನ್ನು ಪರಿಶೀಲಿಸದೆ 2 ಮತ್ತು 3ನೇ ಎದುರುದಾರರು ಧನಸಹಾಯವನ್ನು ನೀಡಲು ಸಹಕರಿಸಿರುವುದು ಅವರ ಕರ್ತವ್ಯಲೋಪವನ್ನು ತೋರಿಸುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರುಪಡಿಸಿರುವ ಜಿ.ಪಿ.ಎಸ್ ಭಾವಚಿತ್ರಗಳನ್ನು ಪರಿಶೀಲಿಸಿದಾಗ, ರತ್ನಮ್ಮರವರ ಮೊದಲನೇ ಹಂತದ ಜಿ.ಪಿ.ಎಸ್. ಅಪಲೋಡ್ ಮಾಡಿರುವ ಭಾವಚಿತ್ರದಲ್ಲಿ ಫಲಾನುಭವಿಯ ಭಾವಚಿತ್ರ ಕೂಡ ಕಂಡುಬರುತ್ತಿದ್ದು, ಭಾವಚಿತ್ರದಲ್ಲಿ ಫಲಾನುಭವಿ ಇರುವುದರಿಂದ ತಪ್ಪಾಗಿ ಅಪಲೋಡ್ ಮಾಡುವ ಸಂದರ್ಭ ಇಲ್ಲವೆಂದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಒಪ್ಪಲು ಸಕಾರಣಗಳಿಲ್ಲ.

ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ, 2 ಮತ್ತು 3ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಸದರಿಯವರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ. ಆದುದರಿಮದ 2ನೇ ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದೆ.

2 ಮತ್ತು 3ನೇ ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ, ದುರ್ವರ್ತನೆ ತೋರಿಸಿ, ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) (ii) ಮತ್ತು (iii) ಅಡಿಯಲ್ಲಿ ಶಿಸ್ತು ಕ್ರಮಕ್ಕೆ ಭಾದ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ 2 ಮತ್ತು 3ನೇ ಎದುರುದಾರರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರುಗಳ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/68/ಗ್ರಾಪಂಕಾ/2018 ಬೆಂಗಳೂರು, ದಿನಾಂಕ: 03-03-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1)ಶ್ರೀ ಬಿ.ಜೆ.ಶ್ರೀಧರನಾಯ್ಕ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ 2)ಶ್ರೀ ಬಸವರಾಜಯ್ಯ, ಹಿಂದಿನ ಕಾರ್ಯದರ್ಶಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

5/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 36 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.
6. ಶ್ರೀ ಬಿ.ಜಿ.ಶ್ರೀಧರನಾಯ್ಕ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
7. ಶ್ರೀ ಬಸವರಾಜಯ್ಯ, ಹಿಂದಿನ ಕಾರ್ಯದರ್ಶಿ, ಮತ್ತೋಡು ಗ್ರಾಮ ಪಂಚಾಯತಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
9. ಗಣಕ ಕೋಶ.